**ದಿನಾಂಕಃ 13.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಜಿ.ಬಿ.ಎನ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಿಪಿಃ 32- 1952-53 ನೇ ಸಾಲಿನ ನಮೂನೆ 8 ರಲ್ಲಿನ ಕಂದಾಯ ಬೇಡಿಕೆ ರೆಜಿಸ್ಟರ್
ನಿಪಿಃ 33- ವಿಚಾರಣಾ ರೆಜಿಸ್ಟರ್ ನಂ. 8 CTS No. 2732 ಸ್ವತ್ತಿಗೆ ಸಂಬಂಧಪಟ್ಟಿದ್ದು
ನಿಪಿಃ 34- ವಿಚಾರಣಾ ರೆಜಿಸ್ಟರ್ ನಂ. 8 CTS No. 2733 ಸ್ವತ್ತಿಗೆ ಸಂಬಂಧಪಟ್ಟಿದ್ದು
ನಿಪಿಃ 35- ವಿಚಾರಣಾ ರೆಜಿಸ್ಟರ್ ನಂ. 8 CTS No. 2734 ಸ್ವತ್ತಿಗೆ ಸಂಬಂಧಪಟ್ಟಿದ್ದು
ನಿಪಿಃ 36- ಪುರಸಭೆ ಕಾರ್ಯಾಲಯ ಸಂಕೇಶ್ವರ ರವರು ನೀಡಿರುವ ಪ್ರಮಾಣ ಪತ್ರ
ನಿಪಿಃ 37- 1964 ರಿಂದ 67 ರ ವರ್ಷಕ್ಕಾಗಿ ಮನೆ/ಭೂಮಿ ಕರಗಳ ಆಕರಣೆ ಯಾದಿ ಸ್ವತ್ತಿನ ಸಂಖ್ಯೆ 2681 ಗೆ ಸಂಬಂಧಪಟ್ಟಿದ್ದು
ನಿಪಿಃ 38- 1964 ರಿಂದ 67 ರ ವರ್ಷಕ್ಕಾಗಿ ಮನೆ/ಭೂಮಿ ಕರಗಳ ಆಕರಣೆ ಯಾದಿ ಸ್ವತ್ತಿನ ಸಂಖ್ಯೆ 2680 ಗೆ ಸಂಬಂಧಪಟ್ಟಿದ್ದು

**ಪಾಟೀ ಸವಾಲುಃ 1 ರಿಂದ 5 ನೇ ಎದುರುದಾರ ಪರ ಶ್ರೀ. ಎಂ.ಸಿ.ಜಿ. ವಕೀಲರಿಂದಃ**

1. ನಾನು ಹೆಚ್ಚುವರಿ ಮುಖ್ಯ ವಿಚಾರಣಾ ಪ್ರಮಾ ಣಪತ್ರದಲ್ಲಿ ವೃತ್ತಿಯಲ್ಲಿ ಕೃಷಿಕ ಎಂದು ಬರೆದಿದ್ದೇನೆ ಆದರೆ ಹಾಲಿ ನಾನು ಯಾವುದೇ ಕೃಷಿ ಚಟುವಟಿಕೆಗಳನ್ನು ಮಾಡುವುದಿಲ್ಲ. ನನಗೆ ಯಾವುದೇ ಕೃಷಿ ಜಮೀನು ಇಲ್ಲ. ನನ್ನ ತಾಯಿಯ ಹೆಸರು ಭೀಮವ್ವಾ ರಾಮು ಭೋವಿ ಆಕೆ ಈಗ ಬದುಕಿಲ್ಲ ಕಾರಣ ಆಕೆ 2014 ರಲ್ಲ ಕಾಲವಾಗಿರುತ್ತಾಳೆ. ಆಕೆ ಕಾಲವಾಗಿದ್ದಾಳೆಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ತಾಯಿಯ ಹೆಸರು ಭೀಮವ್ವಾ ಲಕ್ಷ್ಮಣ ಭೋವಿ ಆಕೆ ಲಕ್ಷ್ಮಣ ಭೋವಿಯವರನ್ನು ಮದುವೆಯಾಗಿದ್ದರಿಂದ ಮುದೋಳದಲ್ಲಿ ತೀರಿಕೊಂಡಿದ್ದರು ಎಂದು ಸೂಚಿಸುವುದು ಸರಿಯಲ್ಲ. ಆಕೆ ತೀರಿಕೊಂಡ ನಂತರ ಅವಳ ಕಾನೂನು ಬದ್ಧ ವಾರಸುದಾರರು ನಾವು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿಃ 32 ರಲ್ಲಿ ಸ್ವತ್ತಿನ ಮಾಲೀಕರು ಎಂದು ಶೆಟ್ಟೆಪ್ಪಾ ಸತ್ಯಪ್ಪಾ ಭೋವಿ ಎಂದು ಮರಾಠಿಯಲ್ಲಿ ನಮೂದಾಗಿದೆ ಎಂದರೆ ಸರಿ. ಶೆಟ್ಟೆಪ್ಪಾ ಸತ್ಯಪ್ಪಾ ಭೋವಿ ರವರ ಜಾಗದಲ್ಲಿ ಡಿ.ಬಿ.ತುಬಚಿ ರವರು ಸ್ವಾಧೀನದಲ್ಲಿ ಇರುತ್ತಾರೆಂದು

ಮರಾಠಿಯಲ್ಲಿ ಬರೆದಿದೆ ಎಂದರೆ ಸರಿ. ನಿಪಿಃ 32 ರಲ್ಲಿ ಸ್ವತ್ತಿನ ಸಂಖ್ಯೆ 2216, 2217 ಸ್ವತ್ತುಗಳು ಶೆಟ್ಟೆಪ್ಪಾ ಸತ್ಯಪ್ಪಾ ಭೋವಿ ರವರಿಗೆ ಯಾವ ರೀತಿ ಬಂದಿವೆ ಎಂದು ನಮೂದು ಆಗಿಲ್ಲ ಎಂದರೆ ಸರಿ. ಈ ಸ್ವತ್ತುಗಳಿಗೆ ಮೊದಲು VPC ಸಂಖ್ಯೆಗಳು ಇದ್ದವು ನಂತರದಲ್ಲಿ ಅವುಗಳಿಗೆ TMC ಸಂಖ್ಯೆಗಳನ್ನು ನೀಡಿದ್ದಾರೆ ಎಂದರೆ ಸರಿ. ಈಗ ಅವುಗಳಿಗೆ CTS ಸಂಖ್ಯೆಗಳನ್ನು ನೀಡಿದ್ದಾರೆಂದರೆ ಸರಿ. ಸದರಿ ಸ್ವತ್ತುಗಳು ನನ್ನ ಅಜ್ಜನಿಂದ ಬಂದಂತಹ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳು ಮೂಲ ಜಗದ್ಗುರು ಶಂಕರಾಚಾರ್ಯ ಮಠಕ್ಕೆ ಸೇರಿದ್ದವು ಎನ್ನುವುದು ಸರಿ. ನನ್ನ ತಾಯಿ ನನ್ನ ಹೆತ್ತ ಮೂರು ವರ್ಷಕ್ಕೆ ತನ್ನ ಗಂಡ ಹಾಗೂ ಮಕ್ಕಳನ್ನು ಬಿಟ್ಟು ಹೋಗಿದ್ದರಿಂದ ನನ್ನ ತಂದೆ 1 ನೇ ಪ್ರತಿವಾದಿಯನ್ನು ಮದುವೆಯಾಗಿದ್ದು ಆಕೆಯೇ ನಮ್ಮನ್ನು ಜೋಪಾನ ಮಾಡಿದಳು ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಆತನ ಮೊದಲ ಹಾಗೂ 2 ನೇ ಹೆಂಡತಿಯ ಮಕ್ಕಳ ಹೆಸರನ್ನು ಒಟ್ಟಾಗಿ ಉತಾರಿನಲ್ಲಿ ಸೇರಿಸಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. CTS No.2734 ರ ಸ್ವತ್ತಿನಲ್ಲಿ ಶಂಕರೆಪ್ಪಾ ಶಿವಪ್ಪಾ ಮುರಗುಡೆ ಎಂಬುವವರು ಸ್ವಾಧೀನಲ್ಲಿದ್ದರು ಎನ್ನುವುದು ಸರಿ. ಅದರಲ್ಲಿ ಒಂದು ಆಯಿಲ್ ಮಿಲ್ ಇತ್ತು ಎನ್ನುವುದು ಸರಿ. ಆತ ತೀರಿಕೊಂಡ ನಂತರ ಆತನ ಹೆಂಡತಿ ಶಾಂತವ್ವಾ ಮುರಗುಡೆ ಸ್ವಾಧೀನಕ್ಕೆ ಬಂದರು ಎಂದರೆ ಸರಿ. ಶಾಂತವ್ವಾ ಮುರಗಡೆಯು ದಿಃ 31.01.1979 ರಂದು CTS No.2734 ರಲ್ಲಿ ಕಟ್ಟಿದ್ದ ಶೇಡ್ ನ ಮೇಲೆ ಹೊಂದಿದ್ದ ಹಕ್ಕನ್ನು ನೊಂದಾಯಿತ ಹಕ್ಕು ಬಿಡುಗಡೆ ಪತ್ರದ ಮೂಲಕ ಬಿಟ್ಟು ಕೊಟ್ಟಿದ್ದಾಳೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಈಗ ಕಟ್ಟಡ ಕಟ್ಟಲು ಅನುಮತಿ ಪಡೆದು ಅಲ್ಲಿ ಎರಡು ಮಹಡಿಗಳ ಕಟ್ಟಡವನ್ನು ಕಟ್ಟಿದ್ದಾಳೆಂದು ಸೂಚಿಸುವುದು ಸರಿಯಲ್ಲ. CTS No.2732, 2733, 2734 ಸ್ವತ್ತುಗಳನ್ನು ನಮ್ಮ ತಂದೆಗೆ ಮೈಸೂರು ಸರ್ಕಾರ ಗ್ರ್ಯಾಂಟ್ ಮೂಲಕ ಕೊಟ್ಟಿದ್ದಾರೆಂದು ಸೂಚಿಸುವುದು ಸರಿಯಲ್ಲ. ಈ ಮೇಲೆ ಹೇಳಿದ ಮೂರು ಸಿಟಿಎಸ್ ಸ್ವತ್ತುಗಳು ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಆಗಿದ್ದರೂ ಸಹಿತ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಗೆ ಈಗ ಮೈಸೂರು ಸರ್ಕಾರವು ಸಿಟಿಎಸ್ ಸಂಖ್ಯೆ 2732, 2733 ಹಾಗೂ 2734 ಸ್ವತ್ತನ್ನು ಗ್ರ್ಯಾಂಟ್ ಮೂಲಕ ಶ್ರೀ. ರಾಮು ಶೆಟ್ಟೆಪ್ಪಾ ಭೋವಿ ರವರಿಗೆ ನೀಡಿರುವ ದಾಖಲೆಗಳನ್ನು ತೋರಿಸಿದ್ದು ಸಾಕ್ಷಿಯು ಆ ರೀತಿ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.